ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ವೈದ್ಯರ ಹುದ್ದೆ - 22

ದಾದಿಯರ ಹುದ್ದೆ - 39

ಆ) ಒಂದು ವೈದ್ಯರ ಹುದ್ದೆ ಖಾಲಿ ಇದೆ. ಮೂರು ದಾದಿಯರ ಹುದ್ದೆ ಖಾಲಿ ಇವೆ.

ಇ) ಜಿಲ್ಲಾ ಶಸ್ತ್ರ ಚಿಕಿತ್ಸಕರ ಹುದ್ದೆ ದಿನಾಂಕ: 31-5-1996ರಿಂದ ನಿವೃತ್ತಿ ಕಾರಣ ಖಾಲಿ ಇರುತ್ತದೆ. ಈ ಹುದ್ದೆಯಲ್ಲಿ ಆರ್.ಎಂ.ಓ. ಡಾ: ವೈ.ಎಂ.ಶ್ರೀನಿವಾಸಯ್ಯ ಅವರನ್ನು ಹೆಚ್ಚುವರಿ ಪ್ರಭಾರದಲ್ಲಿಡಲಾಗಿದೆ. ಮಹಿಳಾ ವೈದ್ಯರ ಹುದ್ದೆ ಖಾಲಿ ಇರುವುದಿಲ್ಲ.

ಈ) ಜಿಲ್ಲಾ ಶಸ್ತ್ರ ಚಿಕತ್ಸಕರ ಹುದ್ದೆಯನ್ನು ಕಿರಿಯ ತಜ್ಞರ ವೃಂದದ ಜೇಷ್ಠತೆಯಲ್ಲಿ ಹಿರಿಯರಾದ ಮತ್ತು ಅರ್ಹ ವೈದ್ಯಾಧಿಕಾರಿಗಳಿಂದ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಖಾಲಿ ಇರುವ ಒಂದು ವೈದ್ಯರ ಹುದ್ದೆಯನ್ನು ಜೇಷ್ಠತೆ ಮತ್ತು ತಜ್ಞತೆ ಆಧಾರದ ಮೇಲೆ ತುಂಬಲಾಗುವುದು. ರಾಜ್ಯದಲ್ಲಿ ಖಾಲಿ ಇರುವ ದಾದಿಯರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯು ಪ್ರಾರಂಭವಾಗಿದ್ದು ಖಾಲಿ ಇರುವ ಈ ಹುದ್ದೆಗಳನ್ನು ಆದ್ಯತೆಯ ಮೇಲೆ ತುಂಬಲಾಗುವುದು.

ವಿಷಯ:- ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಕಿರು ನೀರು ಸರಬರಾಜು ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 478 (1063)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿಗೆ ಸೇರಿದ ಕೊಳವೆ ಭಾವಿ ಕಿರುನೀರು ಸರಬರಾಜು ಮತ್ತು ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಗಳು ಯಾವುವು?

2) 1995-96ನೇ ಸಾಲಿನಲ್ಲಿ ಯಾವಯಾವ ತಾಲ್ಲೂಕುಗಳಿಗೆ ಕಿರುನೀರು ಸರಬರಾಜು ಹಾಗೂ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ?

3) 1995-96ನೇ ಸಾಲಿನಲ್ಲಿ ಈ ಯೋಜನೆಗಳಿಗೆ ಖರ್ಚಾಗಿರುವ ಹಣವೆಷ್ಟು ಮತ್ತು ಹಿಂದಿನ ವರ್ಷಗಳಲ್ಲಿ ಪ್ರಾರಂಭವಾಗಿರುವಂತಹ ಈ ಯೋಜನೆ ಕಾಮಗಾರಿಯು ಯಾವ ಹಂತದಲ್ಲಿದೆ ಮತ್ತು ಈ ಯೋಜನೆಗಳ ಕಾಮಗಾರಿಯ ಪೂರ್ಣಕ್ಕಾಗಿ ಎಷ್ಟು ಹಣ ಬೇಕಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

1) ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ಗೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೆಳಕಂಡ ಯೋಜನೆಗಳು ಸೇರಿರುತ್ತಿವೆ.

ಕ್ರಮ ಸಂಖ್ಯೆ	ಯೋಜನೆ	ಒಟ್ಟು ಸಂಖ್ಯೆ
1)	ನಲ್ಲಿ ನೀರು ಸರಬರಾಜು ಯೋಜನೆ	6252
2)	ಕಿರುನೀರು ಸರಬರಾಜು ಯೋಜನೆ	281
3)	ಕೊಳವೆ ಭಾವಿಗಳ ಯೋಜನೆ	6010

2) 1995-96ನೇ ಸಾಲಿನಲ್ಲಿ ಜಿಲ್ಲೆಯ ಎಲ್ಲಾ 7 ತಾಲ್ಲೂಕುಗಳೂ ಸೇರಿದಂತೆ ಒಟ್ಟು 90 ಕಿರುನೀರು ಸರಬರಾಜು ಯೋಜನೆ ಹಾಗೂ 119 ಗ್ರಾಮೀಣ (ನಳ) ನೀರು ಸರಬರಾಜು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿತ್ತು.

3) 1995-96ನೇ ಸಾಲಿನಲ್ಲಿ ರೂ.434.8ಲಕ್ಷಗಳು ಈ ಯೋಜನೆಗಳಿಗಾಗಿ ಖರ್ಚಾಗಿರುತ್ತದೆ. 119 ನಲ್ಲಿನೀರು ಸರಬರಾಜು ಯೋಜನೆಗಳ ಪೈಕಿ 64 ಮತ್ತು 90 ಕಿರುನೀರು ಸರಬರಾಜು ಯೋಜನೆಗಳ ಪೈಕಿ 22 ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ.

ಬಾಕಿ ಇರುವ ಕುಡಿಯುವ ನೀರಿನ ಯೋಜನೆಯ ವಿವಿಧ ಹಂತಗಳು

	ನಳನೀರು ಸ.ಯೋ	ಕಿರುನೀರು ಸ.ಯೋ
1) ವಿದ್ಯುಚ್ಛಕ್ತಿ ಸಂಪರ್ಕಕ್ಕಾಗಿ	12	10
2) ಜಲಮೂಲ ಇತ್ಯರ್ಥಕ್ಕಾಗಿ	1	3
3) ಅಂದಾಜು ಮಂಜೂರಾತಿಗಾಗಿ	7	3
4) ಪ್ರಗತಿಯಲ್ಲಿರುವ ಕಾಮಗಾರಿಗಳು	35	52
ಒಟ್ಟು	55	68

ಇನ್ನೂ ಉಳಿದ ಮುಂದುವರೆದ ಯೋಜನೆಗಳನ್ನು ಪೂರ್ಣಗೊಳಿಸಲು ರೂ. 162.34 ಲಕ್ಷ ಹಣ ಬೇಕಾಗಿದೆ.

ವಿಷಯ:- ಚಿಕ್ಕಮಗಳೂರು ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕುರಿತು.